ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಹೆಚ್ ಆರ್ ವಕೀಲರಿಂದ ಶ್ರೀ ಎಸ್ ಎನ್ ಜಿ ವಕೀಲರ ಪರವಾಗಿಃ-

ಈ ದಾವೆಯನ್ನು ವಾದಿಗಳು 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ಯಾವ ಉದ್ದೇಶಕ್ಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿದೆ. ನನಗೆ 1 ಮತ್ತು 2 ನೇಪ್ರತಿವಾದಿಗಳ ಬಗ್ಗೆ ಗೊತ್ತಿಲ್ಲ. ವಾದಿಗಳು 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ಯಾವ ಕಾರಣಕ್ಕೆ ಈ ದಾವೆ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿಲ್ಲ. ವಾದಪತ್ರವನ್ನು ತಿಳಿದುಕೊಳ್ಳದೇ ನಾನು ನ್ಯಾಯಾಲಯಕ್ಕೆ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿದೆ. ನಾನು ನನ್ನಪ್ರಮಾಣಪತ್ರದ 4 ನೇ ಖಂಡಿಕೆಯಲ್ಲಿ ದಿಃ 01.04.1997 ರಲ್ಲಿ ಜಿ ಪಿ ಎ ಯನ್ನು ಅಕ್ರಮವಾಗಿ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದು ಈ ರೀತಿ ಯಾವ ಆಧಾರದಲ್ಲಿ ಹೇಳಿದ್ದೇನೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಬಂದಿತ್ತು ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ ರೆವೆನ್ಯೂ ಸೆಕ್ರೇಟರಿಯವರು ಮಾಹಿತಿ ನೀಡಿದ್ದರು ನನಗೆ ಅವರ ಹೆಸರು ಗೊತ್ತಿಲ್ಲ. ನಾನು 2006 ರಲ್ಲಿ ರಾಮನಗರದ ತಲೂಕು ಕಛೇರಿಗೆ ಹೋಗಿದ್ದಾಗ ಆ ರೀತಿ ಮಾಹಿತಿ ನೀಡಿದ್ದರು. ನಮ್ಮನ್ನು ಹೊರತುಪಡಿಸಿ ಮಾರಾಟ ಮಾಡುತ್ತಾರೆ ಎಂಬ ಮಾಹಿತಿ ಬಂದ ಕಾರಣ ಆ ಬಗ್ಗೆ ತಿಳಿಯಲು ನಾನು ತಾಲೂಕು ಕಛೇರಿಗೆ ಹೋಗಿದ್ದೆ.

ತಾಲೂಕು ಕಛೇರಿಗೆ ಹೋಗಲು ನನಗೆ ಯಾರೂ ತಿಳಿಸಿರಲಿಲ್ಲ ನನಗೆ ಅನುಮಾನ ಬಂದ ಕಾರಣ ಹೋಗಿದ್ದೆ. ದಿಃ01.04.1997 ರಲ್ಲಿ ಆಗಿದೆ ಎಂದು

ಹೇಳುವ ಜಿ ಪಿ ಎ ಅನ್ನು ನಾನು ನೋಡಿಲ್ಲ. ತಾಲೂಕು ಕಛೇರಿಗೆ ಹೋದ ವಿಚಾರ, ದಿಃ01.04.1997 ರಲ್ಲಿ ಜಿ ಪಿ ಎ ಆಗಿದೆ ಎಂದು ಹೇಳಿದ ವಿಚಾರ, ಬಗ್ಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದೇನಾ ಎಂದರೆ ಮರೆತಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ ಮರೆವು ಇದೆ ಎಂದು ನಾನು ಹೇಳಿದ್ದು ಮರೆವು ಇದ್ದಿದ್ದೇ ಆಗಿದ್ದಲ್ಲಿ ನಾನು ನನ್ನ ಅಣ್ಣನಲ್ಲಿ ಸಾಕ್ಷಿ ಹೇಳಿಕೆ ಕೊಡಿಸಬಹುದಿತ್ತು ಎಂದರೆ ಸಾಕ್ಷಿಯು ಅವರಿಗೆ ವಯಸ್ಸಾಗಿದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ನಾನು ಸುಮಾರು 1948 ರಿಂದ ನೋಡುತ್ತಿದ್ದೇನೆ. ಸದರಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ 1948 ರಲ್ಲಿ ಯಾರು ಇದ್ದರು ಎಂದರೆ ಸಾಕ್ಷಿಯು ಅರಸಯ್ಯನವರ ಮಕ್ಕಳು, ಸಿದ್ಧಯ್ಯನಮಕ್ಕಳು ಮತ್ತು ಹೆಂಜಾರಯ್ಯನ ಮಕ್ಕಳು ಸ್ವಾಧೀನದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗ ಏನಾಗಿದೆ ಎಂದರೆ ಸಾಕ್ಷಿಯು ಅಲ್ಲಿ ಎಲ್ಲರೂ ವ್ಯವಸಾಯ ಮಾಡುತ್ತಿದ್ದಾರೆ ರಾಗಿ ಬೆಳೆಯುತ್ತಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ವಿಚಾರವಾಗಿ ವಾದಿಗಳು ಮತ್ತು ಪ್ರತಿವಾದಿ 1 ರ ಮಧ್ಯೆ 2005-06 ರಲ್ಲಿ ಗಲಾಟೆ ಆಗಿತ್ತು ಎಂದರೆ ಸರಿ. ಯಾವ ವಿಚಾರವಾಗಿ ಗಲಾಟೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಬೆಂಗಳೂರು ಮೈಸೂರು ರಸ್ತೆಗೆ ದೊಡ್ಡೇರಿಯಿಂದ ಬರುವ ರಸ್ತೆ ಸೇರುವಲ್ಲಿ ಹೊಂದಿಕೊಂಡಿದೆ ಎಂದರೆ ಸರಿ. ದಾವಾ ಸ್ವತ್ತು ರಸ್ತೆಗೆ ಹೊಂದಿಕೊಂಡಿರುವ ಜಾಗದಲ್ಲಿ ಒಂದು ಮನೆ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಒಂದು ಭಾಗ ರಸ್ತೆಯ ಇನ್ನೊಂದು ಪಕ್ಕದಲ್ಲಿ ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಅದು ಬೇರೆ ಸರ್ವೆ

ನಂಬರ್ ಆಸ್ತಿ ಆಗಿದ್ದು ಅದು ಬೇರೆ ಅವರಿಗೆ ಸೇರಿದೆ ಅವರು ಯಾರು ಎಂದರೆ ಸಾಕ್ಷಿಯು ಅವರು ಬೇರೆ ಕಡೆಯಿಂದ ಬಂದು ಆಸ್ತಿ ಖರೀದಿಸಿದ್ದು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದ ಮನೆಯಿರುವ ಬೇರೆ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸರ್ವೆ ನಂ:33 ರಲ್ಲಿ ದಾವಾ ಸ್ವತ್ತಿನಲ್ಲಿ ಬೆಂಗಳೂರು ಮೈಸೂರು ರಸ್ತೆಯಿಂದ ದೊಡ್ಡೇರಿ ಕಡೆ ಹೋಗುವ ರಸ್ತೆಯ ಬಲಭಾಗದಲ್ಲಿ ಒಂದು ಪಾಳು ಬಿದ್ದ ಮನೆ ಇದೆ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ದಿ:30.07.2005 ರಂದು 1 ಮತ್ತು 2 ನೇ ಪ್ರತಿವಾದಿಗಳು ಕ್ರಯಪತ್ರ ಸೃಷ್ಟಿಸಿಕೊಂಡು 1 ನೇ ಪ್ರತಿವಾದಿ ಮತ್ತು ಅವರು ಸಹಚರರು ಏಕಾ ಏಕಿ ಬಂದು ಆ ಮನೆಯನ್ನು ಒಡೆದು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಅವರು ಸಹಚರರು ಆ ಮನೆಯನ್ನು ಒಡೆದು ಹಾಕಿದ ನಂತರ ವಾದಿಗಳು 1 ಮತ್ತು 2 ನೇ ಪ್ರತಿವಾದಿಗಳು ವಾದಿಗಳ ದಾವಾ ಸ್ವತ್ತಿನ ಸ್ವಾಧೀನ ತಪ್ಪಿಸುತ್ತಾರೆ ಎಂದು ತಿಳಿದು ವಾದಿಗಳು ಮತ್ತು 3 ನೇ ಪ್ರತಿವಾದಿ ಪೊಲೀಸರಿಗೆ 1 ಮತ್ತು 2 ನೇ ಪ್ರತಿವಾದಿಯ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಮತ್ತು 3 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದ ಕಾರಣ 1 ಮತ್ತು 2 ನೇ ಪ್ರತಿವಾದಿಗಳು ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ಮನೆ ಒಡೆದು ಹಾಕಿದ ಬಗ್ಗೆ ದೂರು ಕೊಟ್ಟು ಅವರೇ ಸ್ವಾಧೀನದಲ್ಲಿದ್ದ ಕಾರಣ ಸ್ವತ್ತನ್ನು ರಕ್ಷಿಸಿಕೊಂಡಿದ್ದರು ಮತ್ತು ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದಿದ್ದ ಕಾರಣ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು ನನಗೆ ತಿಳಿಯಂದಂತೆ ನನ್ನ ದೊಡ್ಡಪ್ಪನ ಅಣ್ಣನ ಮಕ್ಕಳು ಜಮೀನು ವ್ಯವಹಾರ ಮಾಡಿದ್ದರು ಎಂದು ನುಡಿಯುತ್ತಾರೆ. ಅವರು ಅಕ್ರಮವಾಗಿ ಜಮೀನು ಮಾರಾಟ

ಮಾಡಿದ್ದು ಇದು ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ವಾದಿಗಳು ಅವರಿಗೆ ತಿಳಿಯದಂತೆ ಕ್ರಯಪತ್ರ ಸೃಷ್ಟಿಸಿದ್ದಾರೆ ಎಂದು ಹಾಗೂ ಸದರಿ ಕ್ರಯಪತ್ರ ವಾದಿಗಳಿಗೆ ಬಾಧಿಸುವುದಿಲ್ಲ ಎಂದು ಅದನ್ನು ರದ್ದುಗೊಳಿಸಲು ಕೋರಿ ಈ ದಾವೆ ಹಾಕಿದ್ದಾರೆ ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ.

1 ನೇಪ್ರತಿವಾದಿ ಯಾವ ರೀತಿ ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಸಲ್ಲಿಸಿದ ಲಿಖಿತ ಹೇಳಿಕೆಗೆ ಪೂರಕವಾಗಿ ಸಾಕ್ಷಿ ನುಡಿಯಲು ಈ ನ್ಯಾಯಾಲಯಕ್ಕೆ ನಾನು ಮತ್ತು 4 ನೇ ಪ್ರತಿವಾದಿ ಬಂದಿದ್ದೇವೆ ಎಂದರೆ ಸರಿಯಲ್ಲ. ನಾನು ತಾಲೂಕು ಕಛೇರಿಯಲ್ಲಿ ಯಾವುದೇ ಮಾಹಿತಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿಗಳು ಈ ದಾವೆ ಸಲ್ಲಸಿದ ನಂತರ 1 ಮತ್ತು 2 ನೇ ಪ್ರತಿವಾದಿಗಳು ನಮ್ಮನ್ನು ಎತ್ತಿಕಟ್ಟಿ ನಾವು ಈ ದಾವೆಯಲ್ಲಿ ಪಕ್ಷಗಾರರಾಗಿ ಬರುವಂತೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದ ಕಾರಣ ದಾವಾ ಸ್ವತ್ತಿನಲ್ಲಿ ಮನೆ ಇದ್ದರೂ ಇಲ್ಲ ಅದು ಬೇರೆ ಸರ್ವೇ ನಂಬರ್ ಸ್ವತ್ತಿನನಲ್ಲಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಅಲ್ಲಿ ಮನೆ ಇಲ್ಲ ಬೇರೆ ಸರ್ವೆ ನಂಬರ್ ಜಾಗದ ಎದುರುಭಾಗದಲ್ಲಿ ಮನೆ ಇದೆ ಎಂದು ನುಡಿಯುತ್ತಾರೆ. ಮನೆ ಇದ್ದ ಜಾಗದಲ್ಲಿ ಗೋಡೆಗಳು ಮಾತ್ರ ಇದ್ದು ಕಿಟಿಕಿ ಹಾಗೂ ಚಾವಣಿಗೆ ಹೊದಿಸಿದ ಶೀಟ್ ಗಳನ್ನು ಕಿತ್ತಿದ್ದಾರೆ ಎಂದೆರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ಮನೆಯನ್ನು ಒಡೆದು ಹಾಕಿದ ಬಗ್ಗೆ ವಾದಿಗಳು ಮತ್ತು 3 ನೇ ಪ್ರತಿವಾದಿ, 1 ನೇ ಪ್ರತಿವಾದಿಯ ವಿರುದ್ಧ ದೂರು ನೀಡಿದ್ದು ಈ ಸಂಬಂಧ ಸಿ ಆರ್ 75/2006 ರಂತೆ ಬಿಡದಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಪೊಲೀಸರು ತನಿಖೆಯ ನಂತರ 10 ವರ್ಷಗಳ ನಂತರ ಬಿ ಅಂತಿಮವರದಿಯನ್ನು ಸಲ್ಲಿಸಿದ್ದು ಅದನ್ನು ಈ ದಾವೆಯ

ವಾದಿಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದು ಅದನ್ನು ಪುರಸ್ಕರಿಸಿದ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ರಾಮನಗರ ಸಿಸಿ:229/2018 ರಂತೆ ಕೇಸು ದಾಖಲಿಸಿಕೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನನಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲದ ಕಾರಣ ನಾನು 1 ಮತ್ತು 2ನೇ ಪ್ರತಿವಾದಿಗಳು ನಡೆಸಿದ ದೌರ್ಜನ್ಯವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಅಸಲು ದಾವೆ ಸಂಖ್ಯೆ :123/1994 ಅನ್ನು ವಾದಿಗಳ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ 2000 ಇಸವಿಯಲ್ಲಿ ವಜಾ ಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಮಾಗಡಿ ನ್ಯಾಯಾಲಯದಲ್ಲಿ ತಮ್ಮಣ್ಣಯ್ಯ ಬಿನ್ ಬೆಟ್ಟಯ್ಯನವರ ವಿರುದ್ಧ ಮನೆ ಸ್ವತ್ತು ಖಾನೇಷುಮಾರಿ ಸಂಖ್ಯೆ 41(146/4) ಕ್ಕೆ ಸಂಬಂಧಪಟ್ಟಂತೆ ಅಸಲು ದಾವೆ ಸಂಖ್ಯೆ 27/1985 ಅನ್ನು ಸಲ್ಲಿಸಿದ್ದೆ ಎಂದರೆ ಸರಿ. ನಾನು ಈಗ ನೋಡುತ್ತಿರುವ ವಾದ ಪತ್ರ ಸದರಿ ದಾವೆಯಲ್ಲಿ ಸಲ್ಲಿಸಿದ ವಾದ ಪತ್ರದ ದೃಢೀಕೃತ ನಕಲು ಎಂದರೆ ಸರಿ. ಸಾಕ್ಷಿಯು ಅದನ್ನು ಗುರುತಿಸಿದ ಕಾರಣ ಅದನ್ನು ನಿಪಿ-68 ಎಂದು ಗುರುತಿಸಲಾಯಿತು. ನಾನು ಸದರಿ ದಾವೆಯಲ್ಲಿ ದಿ:16.7.1942 ರಲ್ಲಿ ಸದರಿ ದಾವಾ ಸ್ವತ್ತನ್ನು ಹೆಂಜಾರಯ್ಯನವರು ಮೂರ್ಖಣ್ಣಯ್ಯ ಮತ್ತು ಸಾಕ್ಷಯ್ಯ ನವರಿಂದ ಖರೀದಿಸಿದ್ದರು ಎಂದು ಹೇಳಿದ್ದೆ ಎಂದರೆ ಸರಿ. ನಾನು ಸದರಿ ದಾವೆಯಲ್ಲಿ 1985 ರಲ್ಲಿ 25 ವರ್ಷಗಳ ಹಿಂದೆ ಸದರಿ ದಾವಾ ಸ್ವತ್ತು ನಮ್ಮ ತಂದೆಯ ಭಾಗಕ್ಕೆ ಬಂದಿತ್ತು ಎಂದು ಹೇಳಿದ್ದೆ ಎಂದರೆ ಸರಿ. ಸದರಿ ದಾವಾ ಸ್ವತ್ತಿನ ಉತ್ತರ ಭಾಗಕ್ಕೆ ನನ್ನ ಅಣ್ಣ ಶಿವಲಿಂಗಯ್ಯ ಅದರೆ ಈ ದಾವೆಯ 4 ನೇ ಪ್ರತಿವಾದಿಯ ಸ್ವತ್ತು ಇದೆ ಎಂದು ಬರೆಸಿದ್ದೆ ಎಂದರೆ ಸರಿ. ದಿ: 16.07.1942 ರ ಕ್ರಯಪತ್ರ

ವನ್ನು ನಾನು ಸದರಿ ದಾವೆಯಲ್ಲಿ ಹಾಜರು ಮಾಡಿ ಅದರ ಆಧಾರದಲ್ಲಿ ಪರಿಹಾರ ಕೇಳಿದ್ದೆ ಎಂದರೆ ಸರಿ. ನಿಃ16.07.1942 ರ ಕ್ರಯಪತ್ರದಲ್ಲಿ ಸರ್ವೆ ನಂಃ3 ನೇ ಸಬ್ 2 ನೇ ನಂಬರ್ ಜಮೀನಿನಲ್ಲಿ 5 ಗುಂಟೆ ಜಮೀನಿನ ಉತ್ತರಕ್ಕೆ ಅರಸಯ್ಯನವರ ಜಮೀನು ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮನೆ ಸ್ವತ್ತಿನ ಖಾತೆ ಸಿದ್ದಯ್ಯ ಬಿನ್ ಹೆಂಜಯ್ಯನವರ ಹೆಸರಿನಲ್ಲಿದ್ದು ಸದರಿ ಸಿದ್ದಯ್ಯ ಯಾರು ಎಂದರೆ ನಮ್ಮ ತಂದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಕ್ಷಿ ದಾರರಿಗೆ ನಮೂನೆ 12 ರ ದೃಢೀಕೃತ ನಕಲನ್ನು ತೋರಿಸಿ ಅದರ ಬಗ್ಗೆ ಕೇಳಲಾಗಿ ಸದರಿ ದಾಖಲೆಯನ್ನು ಅವರು ಅಸಲು ದಾವೆ 27/1985 ರಲ್ಲಿ ಸಲ್ಲಿಸಿದ್ದರು ಎಂದು ಹೇಳಿದಾಗ ಸರಿ ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ-69 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಆ ಮನೆಯಲ್ಲಿ ಸಿದ್ದಯ್ಯನವರು ಕುಟುಂಬಂದವರು ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-69 ರಲ್ಲಿ ಹೇಳಿದ ಕುಟುಂಬದ ಸದಸ್ಯರ ವಿವರ ಸರಿಯಾಗಿದೆ.

ಸದರಿ ಸ್ವತ್ತಿಗೆ ಸಿದ್ದಪ್ಪ ಕಂದಾಯ ಪಾವತಿಸಿದ್ದರು ಎಂದರೆ ಕಂದಾಯ ಪಾವತಿಸಿದ್ದೆವೆ ಎಂದು ಸಾಕ್ಷಿ ನುಡಿಯುತ್ತಾರೆ. ಕಂದಾಯ ಪಾವತಿಸಿದ ಬಗ್ಗೆ ದಾಖಲೆಯನ್ನು ತೋರಿಸಿದಾಗ ಕಾಣಿಸುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. 1985 ರಲ್ಲಿ ನಿಪಿ-68 ರ ಪ್ರಕಾರ ನನ್ನ ವಯಸ್ಸು 32 ಎಂದರೆ ಸರಿ. ಅಸಲು ದಾವೆ ಸಂಖ್ಯೆ 27/1985 ರಲ್ಲಿ ನನ್ನ ಸಾಕ್ಷಿ ವಿಚಾರಣೆ ಆಗಿತ್ತು ಎಂದರೆ ಸರಿ. ಸಾಕ್ಷಿಗೆ ಅವರ ಸಾಕ್ಷಿ ವಿಚಾಣೆಯ ದೃಢೀಕೃತ ನಕಲನ್ನು ತೋರಿಸಿದಾಗ ಸರಿಯಾಗಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯಲ್ಲಿ ನಾನು ಉತ್ತರಕ್ಕೆ ಶಿವಲಿಂಗಯ್ಯ ನವರ ಅಂಗಳ ಮತ್ತು ಮನೆ ಎಂದು ಹೇಳಿದ್ದೆ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ

ಹೇಳಿಕೆಯಲ್ಲಿ ನಾನು ಸ್ವತ್ತನ್ನು ಖರೀದಿಸಿದಾಗ ನನ್ನ ತಂದೆ ಮತ್ತು ಚಿಕ್ಕಪ್ಪ ಜೊತೆಯಾಗಿದ್ದು ನಂತರ ಬೇರೆ ಬೇರೆ ಯಾಗಿದ್ದರು ಎಂದು ಹೇಳಿದ್ದೆ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ಬೇರೆ ಬೇರೆ ಆದಾಗ ಸದರಿ ಸ್ವತ್ತು ನಮ್ಮ ತಂದೆಯ ಭಾಗಕ್ಕೆ ಬಂದಿತ್ತು ಎಂದು ನಾನು ಹೇಳಿದ್ದೆ ಎಂದರೆ ನನಗೆ ನೆನಪಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಹೇಳಿಕೊಟ್ಟ ದಿಃ06.11.1990 ರಲ್ಲಿ ವಿಭಾಗ ವಾಗಿ 30 ವರ್ಷಗಳು ಆಗಿವೆ ಎಂದು ನಾನು ಹೇಳಿದ್ದೆ ಎಂದರೆ ನೆನಪಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಮತ್ತು ನನ್ನ ಅಣ್ಣ ಶಿವಲಿಂಗಯ್ಯ 10-12 ವರ್ಷಗಳ ಹಿಂದೆಯೇ ವಿಭಾಗವಾಗಿದ್ದೆವು ಎಂದು ಹೇಳಿದ್ದೆ ಎಂದರೆ ನನಗೆ ಗೊತ್ತಿಲ್ಲ.

ದಿಃ25.06.1991 ರಲ್ಲಿ ಸದರಿ ದಾವೆಯಲ್ಲಿ ರಾಮಕೃಷ್ಣಯ್ಯ ಬಿನ್ ಚಿಕ್ಕಣ್ಣ ರವರ ಸಾಕ್ಷಿ ವಿಚಾರಣೆ ಮಾಡಿಸಿದ್ದೆ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಅವರೂ ಉತ್ತರಕ್ಕೆ ಚಿಕ್ಕ ಹೆಂಜಯ್ಯನವರ ಸ್ವತ್ತು ಎಂದು ಹೇಳಿದ್ದರು ಎಂದರೆ ನನಗೆ ನೆನಪಿಲ್ಲ. ಚಿಕ್ಕ ಹೆಂಜಯ್ಯನವರ 1 ನೇ ವಾದಿ ರಾಮಕ್ಕನವರ ಗಂಡ ಎಂದರೆ ಸರಿ. ಅಸಲು ದಾವೆ ಸಂಖ್ಯೆ 27/1985 ವಜಾಗೊಂಡಿತ್ತು ಎಂದರೆ ಸರಿ. ಸಾಕ್ಷಿಗೆ ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ತೋರಿಸಿದಾಗ ಅವುಗಳನ್ನು ಗುರುತಿಸಿದ ಕಾರಣ ಸದರಿ ದಾಖಲೆಗಳನ್ನು ನಿಪಿ-70 ಮತ್ತು ನಿಪಿ-71 ಎಂದು ಗುರುತಿಸಲಾಯಿತು.

ನನ್ನ ಅಣ್ಣ ಶಿವಲಿಂಗಯ್ಯ ಬೆಂಗಳೂರು ದಕ್ಷಿಣದ ಎ ಸಿ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ ಆರ್ ಎ (ಎಸ್) 41/99-2000 ದಂತೆ ಲಿಂಗಪ್ಪ ಹೆಂಜಾರಯ್ಯ ಮತ್ತು ರಾಮಕ್ಕನವರ ವಿರುದ್ಧ ಸರ್ವೆ ನಂಃ122/3 ಎ,

122/3 ಬಿ, 92/1 ಎ, 122/4, 92/2 ಎ, 92/5, 92/2 ಬಿ, 92/7, 92/6, 92/4, 92/3 ಮತ್ತು 92/1 ಎ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಅಪೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನ್ನ ಅಣ್ಣ ಈ ದಾವೆಯ ಸ್ವತ್ತನ್ನು ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವಾ ಸ್ವತ್ತು ನಮಗೆ ಸೇರಿದ ಸ್ವತ್ತು ಅಲ್ಲದ ಕಾರಣ ಅವುಗಳನ್ನು ಸದರಿ ಅಪೀಲಿನಲ್ಲಿ ಸೇರಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ 4 ನೇ ಪ್ರತಿವಾದಿಯ ಪರವಾಗಿಯೂ ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಅಣ್ಣನ ಪರವಾಗಿ ಸಾಕ್ಷಿ ನುಡಿಯುವಾಗ ಅವರು ಮಾಡಿದ ವ್ಯವಹಾರಗಳ ಬಗ್ಗೆ ಮಾಹಿತಿ ತೆಗೆದುಕೊಂಡು ಬಂದಿದ್ದೇನೆ. ನನ್ನ ಅಣ್ಣ ನಮ್ಮ ತಂದೆಯ ಭಾಗಕ್ಕೆ 9 ಎಕರೆ ಆಸ್ತಿ ಬಂದಿದೆ ಎಂದು ಆ ಬಗ್ಗೆ ಖಾತೆ ಮಾಡಲು ಎ ಸಿ ಅವರ ಮುಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಒಟ್ಟು 27 ಎಕರೆ ಆಸ್ತಿಯಲ್ಲಿ ನಮ್ಮ ತಂದೆಯ ಭಾಗಕ್ಕೆ ಮೌಖಿಕ ವಿಭಾಗದಲ್ಲಿ 9 ಎಕರೆ ಆಸ್ತಿ ಬಂದಿದ್ದು ಆ ಬಗ್ಗೆ ಖಾತೆ ಮಾಡಬೇಕು ಎಂದು ಆ ಬಗ್ಗೆ ಎ ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ. ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.